ಸಾಕ್ಷಿಯನ್ನು ದಿ. 01.08.2025 ರಂದು ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿಯರ ಪರ ಶ್ರೀ ಸಿ ಎ ವಕೀಲರಿಂದಃ-

ದಾವಾ ಸ್ವತ್ತು ಮೂಲತಃ ಈರಪ್ಪನವರಿಗೆ ಸೇರಿತ್ತು. ಈರಪ್ಪನ ತಂದೆ ಹೆಸರು ಕಮಲಕೊಂಡಪ್ಪ. ಕಮಲಕೊಂಡಪ್ಪನಿಗೆ ಇಬ್ಬರು ಗಂಡು ಮಕ್ಕಳು. ಅವರೆಂದರೆ ಮೊದಲನೇಯವರು ಈರಪ್ಪ ಹಾಗೂ ಎರಡನೇಯವರು ತಿಮ್ಮರಾಯಪ್ಪ. ಈರಪ್ಪ ಎಂಬುವವರು ಮಜರಾ ಹೊಸಮನೆಗಳು, ದುಡುವನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. 2 ನೇ ಮಗ ತಿಮ್ಮರಾಯನಾಯಕ ಕೋತಿಗುಟ್ಲಹಳ್ಳಿ ವಾಸವಾಗಿದ್ದರು. ಕೋತಿಗುಟ್ಲಹಳ್ಳಿ ಹಾಗೂ ಮಜರಾ ಹೊಸಮನೆಗಳು, ದುಡುವನಹಳ್ಳಿಗೆ ಒಂದು ಕಿ.ಮೀ. ಅಂತರ ಇದೆ ಎಂದರೆ ಸರಿ. ತಿಮ್ಮರಾಯನಾಯಕ ಹಾಗೂ ಈರಪ್ಪ ಯಾವಾಗ ವಿಭಾಗ ಮಾಡಿಕೊಂಡರು ಎಂದರೆ ಸಾಕ್ಷಿಯು ವಿಭಾಗಮಾಡಿಕೊಂಡಿರುವುದಿಲ್ಲ ಎಂದು ಹೇಳುತ್ತಾರೆ.

1960 ರಿಂದ ಈ ಪ್ರಕರಣವನ್ನು ಹಾಕುವವರೆಗೆ ಅಂದರೆ 2020 ರವರೆಗೆ ಋಣಭಾರರಾಹಿತ್ಯ ಪ್ರಮಾಣ ಪತ್ರದಲ್ಲಿ ಏನು ವ್ಯವಹಾರಗಳು ಆಗಿವೆ ಎಂದು ನಾನು ತಿಳಿದುಕೊಂಡಿಲ್ಲ. ದಿಃ28.06.1961 ರಂದು ಈರಪ್ಪ ಮತ್ತು ತಿಮ್ಮರಾಯನಾಯಕರವರು ವಿಭಾಗ ಮಾಡಿಕೊಂಡಿದ್ದು, ತಿಮ್ಮರಾಯನಾಯಕನಿಗೆ ಬಂದ ದಾವಾಸ್ತಿಯನ್ನು ಸುಂದರ್ ರಾವ್ ಬಲ್ಲಾಳ್ ರವರಿಗೆ ತಿಮ್ಮರಾಯನಾಯಕ ಮಾರಾಟ ಮಾಡಿರುತ್ತಾನೆ ಎಂಬ ವಿಷಯ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ವಿಭಾಗ ಆಗಿರುವುದಿಲ್ಲ ಎಂದು ಹೇಳುತ್ತಾರೆ. ದಿಃ28.06.1961 ರ ಕ್ರಯ ಪತ್ರದ ಪ್ರಕಾರ ದಾವಾ ಸ್ವತ್ತಿನ ಮುಟೇಶನ್ ನ್ನು ರೆವಿನ್ಯೂ ಅಧಿಕಾರಿಗಳು ಸುಂದರ್ ರಾವ್ ಬಲ್ಲಾಳ್ ರವರ ಹೆಸರಿಗೆ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ22.04.1982 ರಂದು ಸುಂದರ್ ರಾವ್ ಬಲ್ಲಾಳ್ ರವರು ಈ ಪ್ರಕರಣದ ಪ್ರತಿವಾದಿಗೆ ದಾವಾಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ22.04.1982 ರ ಕ್ರಯ ಪತ್ರದ ಪ್ರಕಾರ ಪ್ರತಿವಾದಿ ತಿಮ್ಮಕ್ಕನಿಗೆ ಎಂ.ಆರ್. ನಂ.21/1988-89 ರಂತೆ ಮುಟೇಶನ್ ರಿಜಿಸ್ಟರ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಪತ್ರಗಳನ್ನು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಅವಿದ್ಯಾವಂತ. ನಾನು ಸಹಿ ಮಾಡುತ್ತೇನೆ. ನಮ್ಮ ಹುಡುಗರು ಕಲಿಸಿಕೊಟ್ಟಿದ್ದಕ್ಕೆ ನಾನು ಸಹಿ ಹಾಕುವುದನ್ನು ಕಲಿತುಕೊಂಡಿದ್ದೇನೆ.

PW-1: Narayanappa

ದಿ:15.02.1995 ರ ಕ್ರಯ ಪತ್ರಕ್ಕೆ ಸಂಬಂದಪಟ್ಟಂತೆ ಪಹಣಿಯ ದೃಡೀಕೃತ ಪ್ರತಿಯನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಇದು 1995 ರ ಪಹಣಿ ಎಂದರೆ ಸರಿ. ಸದರಿ ನಿಡಿ-1 ಪಹಣಿಯಲ್ಲಿಯೇ ಪ್ರತಿವಾದಿ ತಿಮ್ಮಕ್ಕಳ ಹೆಸರು ನಮೂದು ಇದೆ ಎಂದರೆ ಸಾಕ್ಷಿಯು ಅವರು ಸುಳ್ಳು ಪತ್ರವನ್ನು ಸೃಷ್ಟಿಮಾಡಿಕೊಂಡು ಪಹಣಿಯಲ್ಲಿ ಹಾಕಿಸಿರುತ್ತಾರೆ ಎಂದು ಹೇಳುತ್ತಾರೆ. ನಾವು ಖಾತೆ ಮಾಡಿಸಲು ಹೋದಾಗ ಪ್ರತಿವಾದಿಯ ಹೆಸರಿಗೆ ಖಾತೆ ಬಂದಿದ್ದು ತಿಳಿದುಬಂದಿದ್ದು, ನಾವು ಎ.ಸಿ. ರವರ ಬಳಿ ಅರ್ಜಿ ಸಲ್ಲಿಸಿರುತ್ತೇವೆ. ನಾನು ಎ.ಸಿ.ರವರ ಮುಂದೆ ಪ್ರಕರಣ ಸಂಖ್ಯೆ ಆರ್ ಆರ್ ಟಿ ಸಿ ಆರ್ 10/2018-19 ರಂತೆ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ನಿಡಿ-1 ಕ್ಕೆ ಸಂಬಂದಪಟ್ಟ ಮುಟೇಶನ್ ಎಂದು ಸಾಕ್ಷಿಯು ಒಪ್ಪಿದ್ದು ಸದರಿ ಮುಟೇಶನ್ ನ ದೃಡೀಕೃತ ಪ್ರತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ದಾಖಲೆಗಳು 1988-89 ರಲ್ಲೇ ಪ್ರತಿವಾದಿಯ ಹೆಸರಿಗೆ ಆಗಿರುತ್ತವೆ ಎಂದರೆ ಸಾಕ್ಷಿಯು ಸುಳ್ಳು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. 1988-89 ರಿಂದ 2018-19 ರವರೆಗೆ ಸುಮಾರು 30 ವರ್ಷಗಳ ಕಾಲ ಪಹಣಿ ಪ್ರತಿವಾದಿಯ ಹೆಸರಿಗೆ ಬರುತ್ತಿದೆ ಎಂದರೆ ಸಾಕ್ಷಿಯು ಬರುತ್ತಿದೆ, ಅದರ ಕಾರಣದಿಂದಲೇ ನಾವು ನ್ಯಾಯಾಲಯಕ್ಕೆ ಹೋಗಿರುತ್ತೇವೆ ಎಂದು ಹೇಳುತ್ತಾರೆ.

ದಿ:15.02.1995 ರ ಕ್ರಯಪತ್ರದ ಪ್ರಕಾರ ಮುಟೇಶನ್ ಮಾಡಿಸಿಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿಯು ಪ್ರಯತ್ನಪಟ್ಟಿದ್ದೇವೆ, ಆದರೆ ತಿಮ್ಮಕ್ಕಳ ಹೆಸರಿಗೆ ಬರುತ್ತಿದ್ದ ಕಾರಣ ಆಗಿರುವುದಿಲ್ಲ ಎಂದು ಹೇಳುತ್ತಾರೆ. 1995 ರಲ್ಲಿ ಕ್ರಯ ಪತ್ರದ ಆದರೂ ಸಹ 2018 ರಲ್ಲೇ ಎ.ಸಿ. ನ್ಯಾಯಾಲಯದಲ್ಲಿ ನಾನು ಖಾತೆಗೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. 1995 ರಿಂದ 2018 ರವರೆಗೆ ಖಾತೆ ಯಾಕೆ ಮಾಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ನಮಗೆ ಗೊತ್ತಿರಲಿಲ್ಲ, ನಿಧಾನಕ್ಕೆ ಮಾಡಿಸಿಕೊಳ್ಳೋಣ ಎಂದು ಸುಮ್ಮನಿದ್ದೇವು ಎಂದು ಹೇಳುತ್ತಾರೆ. ದಿ:15.02.1995 ರಿಂದ 2018 ರವರೆಗೆ ನಾನು ದಾವಾಸ್ತಿಯ ಕಂದಾಯ ಕಟ್ಟಿರುವುದಿಲ್ಲ.

ದಾವಾಸ್ತಿಯಲ್ಲಿ ತೊಗರಿ, ಜೋಳ, ರಾಗಿ ಬೆಳೆಯುತ್ತಿದ್ದೇನೆ. ಈ ಬೆಳೆಗಳನ್ನು ಮಳೆಯ ಆಶ್ರಯದಿಂದ ಬೆಳೆಯುತ್ತಿದ್ದೇನೆ. ಹೀಗೆ ತೊಗರಿ, ಜೋಳ, ರಾಗಿ ಬೆಳೆಯುತ್ತಿದ್ದೇನೆ ಎಂದು ವಾದ ಪತ್ರದಲ್ಲಿ ಬರೆಸಿ ಹಾಕಿರುತ್ತೇನೆ. ದಾವಾಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಮುನಿವರದನಾಯಕನ ಜಮೀನು, ಪಶ್ಚಿಮಕ್ಕೆ ಗ್ರಾಮಠಾಣಾ, ಉತ್ತರ ಮತ್ತು ದಕ್ಷಿಣಕ್ಕೆ ನಂಜಪ್ಪರವರ ಜಮೀನು.

ನಂಜಪ್ಪ ಎಂದರೆ ಪ್ರತಿವಾದಿಯ ತಂದೆ ಎಂದರೆ ಸರಿ. ನಾನು ದಾವಾಸ್ತಿಯಲ್ಲಿ ಪೂರ್ವ ಮತ್ತು ಪಶ್ಚಿಮದ ಚಕ್ಕುಬಂದಿಯನ್ನು ತಪ್ಪಾಗಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯ ಪೂರ್ವಕ್ಕೆ ಸರ್ಕಾರಿ ಬಂಡೆ ಬರುತ್ತದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಪ್ರತಿವಾದಿಯ ತಂದೆ ನಂಜಪ್ಪನ ಜಮೀನು ಬರುತ್ತದೆ ಎಂದರೆ ಸರಿಯಲ್ಲ, ಗ್ರಾಮಠಾಣಾ ಬುರುತ್ತದೆ. ದಾವಾಸ್ತಿಯಲ್ಲಿ ಪ್ರತಿವಾದಿಯು 3 ತಿಂಗಳ ಹಿಂದೆ ಟಮೇಟೋ ಬೆಳೆಯನ್ನು ಬೆಳೆದಿದ್ದರು ಎಂದರೆ ಸರಿಯಲ್ಲ. ಈ ರೀತಿಯಾಗಿ ವಾಣಿಜ್ಯ ಬೆಳೆ ಬೆಳೆಯಲು ಸರ್ವೆ ನಂಬರ್ 81 ರಲ್ಲಿ ಪ್ರತಿವಾದಿಗೆ ಸೇರಿದ ಜಮೀನು, ಬೋರ್ ವೆಲ್ ಇದ್ದಿದ್ದು ಅದಕ್ಕೆ ಪೈಪ್ ಲೈನ್ ಅಳವಡಿಸಿ, ಅದರಿಂದ ವಾಣಿಜ್ಯ ಬೆಳೆಯನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರಸ್ತುತ ಅವರು ಸದರಿ ದಾವಾ ಸ್ವತ್ತಿನಲ್ಲಿ ರಾಗಿ ಹಾಗೂ ಕಡಳೆಕಾಯಿ ಬೆಳೆಯನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ** ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ.

Sd/-
(ಹೆಚ್.ಜಿ. ಶಿಲ್ಪಾ)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮಾಲೂರು.